# ಏಳು ಚುಕ್ಕಿ ರಂಗೋಲಿ

ಯುಗಾದಿ ಪ್ರಬಂಧ ಸ್ಪರ್ಧೆ 2024

ತೀರ್ಪುಗಾರರು ಮೆಚ್ಚಿದ ಪ್ರಬಂಧ

◆ ಪ್ರವೀಣ್ ಕುಮಾರ್ ಜಿ.

ಕಲೆ: ರಾಮಕೃಷ್ಣ ಸಿದ್ರಪಾಲ

1

ಯಾವುದಾದರೂ ದೊಡ್ಡ ಊರಿನ ಲೆಕ್ಕದಲ್ಲಿ ನೋಡಿದರೆ ನಾವು ಹಳೆಯದನ್ನೆಲ್ಲಾ ಕಳೆದುಕೊಂಡು ಬರುತ್ತಲೇ ಇದ್ದೇವೆಂಬ ಕೊರಗು ಇದ್ದೇ ಇರುತ್ತದೆ. ಕನ್ನಡನಾಡಿನ ಮೆದುಳೂರು (ರಾಜಧಾನಿ) ಬೆಂಗಳೂರಿನಲ್ಲಿರುವ ನಾವು ಕಳೆದುಕೊಂಡಿದ್ದೇವೆ ಎಂದುಕೊಂಡಿರುವ ನಮ್ಮ ಎಲ್ಲಾ ಬೆಳಿಗ್ಗೆಗಳ ಒಂದು ಸಣ್ಣ ಸಡಗರವೆಂದರೆ ರಂಗೋಲಿ.

ತನ್ನ ಒಡಲನ್ನು ಬಣ್ಣ ಬಣ್ಣಗಳಿಂದ ತುಂಬಿಕೊಂಡಿರುವ, ಕಣ್ಣುಕ್ಕುವ ಬಣ್ಣಗಳಿಂದ ಕಣ್ಮನಗಳನ್ನು ಟಕ್ಕನೇ ಹಿಡಿದುಕೊಳ್ಳುವ, ಸಭೆ ಸಮಾರಂಭಗಳಲ್ಲಿ ದೊಡ್ಡದಾಗಿ ಕಾಣುವ ಇಲ್ಲವೇ ಹಬ್ಬದ ರಂಗೋಲಿಗಳ ಬಗ್ಗೆ ನಾನು ಹೇಳುತ್ತಿಲ್ಲ; ನಾನು ಹೇಳುತ್ತಿರುವುದು, ಒಂದು ಸರಳವಾದ ಬಿಳಿ ರಂಗೋಲಿ. ನೋಡಿದ ಕೂಡಲೇ ಮನಸು ಕಸ ಗುಡಿಸಿಕೊಂಡು, ನೀರಿನಿಂದ ತಣಿಸಿಕೊಂಡು 'ನಮ್ಮ ಮೆಟ್ರೋ' ಗುರುತಿನಂತೆ ಚಂದಗೆ ಕಾಣುತ್ತಿರುವ ಮನೆಯ ಅಂಗಳದ ಅಂದವನ್ನು ನೂರ್ಮಡಿ ಹೆಚ್ಚಿಸಿರುವ ಪುಟ್ಟ ಬಿಳಿ ಬಣ್ಣದ ರಂಗೋಲಿ.

ಹಿಂದಿನ ಕಾಲದಲ್ಲಿ ಹೆಣ್ಣಿನ ಗೌರವ ಹೆಚ್ಚಿಸುತ್ತಿದ್ದ ಗುಣಗಳಲ್ಲಿ ಮನೆಯನ್ನು ಚಂದ ಇಟ್ಟುಕೊಳ್ಳುವುದೂ ಮದುಮಗಳ ಆಯ್ಕೆಯಲ್ಲಿ ಮಾನದಂಡವಾಗಿತ್ತಂತೆ. ಬೆಳಿಗ್ಗೆ ಬೇಗ ಎದ್ದು, ಮನೆಯ ಅಂಗಳವನ್ನು ಗುಡಿಸಿ, ನೀರು ಹೊಡೆದು, ಪುಟ್ಟದೊಂದು ರಂಗೋಲಿ ಹಾಕಿ ಬರುವ ಹೆಣ್ಣೇ ಮನೆಯ ಮಹಾಲಕ್ಷ್ಮಿಯಂತೆ. ಒಮ್ಮೆ ನಮ್ಮನ್ನು ನಾವೇ ಕೇಳಿಕೊಳ್ಳೋಣ, ನಮ್ಮ ಅಮ್ಮನಿಗೆ ರಂಗೋಲಿ ಬಿಡಿಸಲು ಗೊತ್ತಿಲ್ಲದಿದ್ದರೆ ಅವಳು ನಮಗೆ ಅಮ್ಮನಾಗಲು ಸರಿಯಾದವಳಲ್ಲವೇ? ಈಗಲೂ ಅಡುಗೆಗಿಡುಗೆ, ಕಸಮುಸ್ರೆ, ಬಟ್ಟೆಬರೆ, ತಿಕ್ಕು ತೊಳಿ ಬಳಿಗಳಿಂದ ಹೆಣ್ಣಿನ ಅರಿವನ್ನು, ಒಲವನ್ನು, ಬಲವನ್ನು ಮತ್ತು ಒಳ್ಳೆಯತನವನ್ನು ಅಳೆಯುವವರೆಲ್ಲರ ದಡ್ಡತನ ಸುಟ್ಟು ಹೋಗಲಿ.

ಮತ್ತೆ ಹಳೆಯ ಕಾಲದ ಬಗ್ಗೆ ಯೋಚಿಸಬಹುದಾದರೆ, ಓದಲು ಬರೆಯಲು ಬಲ್ಲ ಆಗಿನ ಹೆಣ್ಣುಮಕ್ಕಳು ಕಟ್ಟು (ಪುಸ್ತಕ) ನೋಡಿ ಅಡುಗೆ ಕಲಿಯುವುದಕ್ಕಾಗಿ, ಮದುವೆಯ ಹೊತ್ತು ಬರುವವರೆಗೆ ಕಾಯುತ್ತಿದ್ದರೇನೋ ನನಗೆ ಗೊತ್ತಿಲ್ಲ. ಆದರೆ ಹೆಣ್ಣುಮಕ್ಕಳು ರಂಗೋಲಿ ಕಲಿಯಲು ಕಟ್ಟು ಹಿಡಿಯುವುದಕ್ಕೆ ಆ ಕಾಲವಲ್ಲ, ಈ ಕಾಲದಲ್ಲೂ ಯಾವುದೇ ಹರೆಯವನ್ನು ನೋಡುವುದಿಲ್ಲ.

2

ನನ್ನೂರು ಬಳ್ಳಾರಿ ಹೊಳಲು (ನಗರ) ಬಿಸಿಲಿಗೆ ಇಡೀ ಉಳಗಕ್ಕೇ ಹೆಸರು. ಬಳ್ಳಾರಿ ಬೇಸಿಗೆಯಲ್ಲಿ ದೊಡ್ಡ ಮಾರ್ಕೆಟ್‌ನಲ್ಲಿ ಒಮ್ಮೆ ಅಮ್ಮ ತನಗೆ ಬೇಕಾಗಿದ್ದ ಸರಕೊಂದು ಕೇಳಿದ ಹತ್ತಾರು ಅಂಗಡಿಗಳಲ್ಲಿ ಎಲ್ಲೂ ಸಿಗದೇ ಚಡಪಡಿಸುತ್ತಿದ್ದಳಂತೆ. ಜೊತೆಗೆ ಬಂದಿದ್ದ ಗೆಳತಿಯರು ತಮ್ಮ ಸಂತೆ ಮುಗಿಸಿಕೊಂಡು, ಇನ್ನೂ ತಿರುಗುತ್ತಾ ತಮ್ಮನ್ನೂ ಮಾರ್ಕೆಟ್ಟು ಸುತ್ತಿಸುತ್ತಿರುವ ಅಮ್ಮನನ್ನು ಕಣ್ಣುಗಳಲ್ಲೇ ಸುಡುತ್ತಿದ್ದರಂತೆ. ನಮ್ಮಮ್ಮ ಅಥವಾ ಅಮ್ಮನಾಗಿರುವ ಯಾವುದೇ ಹೆಣ್ಣು ತಾನು ಪಟ್ಟು ಹಿಡಿದ ಕೆಲಸದಿಂದ ಹಿಂದಕ್ಕೆ ಸರಿಯುವುದುಂಟೇ? ಹತ್ತಾರು ನಾಳುಗಳಿಂದ (ದಿನ) ದೊಡ್ಡ ಯೋಜನೆ ಹಾಕಿಕೊಂಡು ಅಪ್ಪಜ್ಜಿ ಕೆಲಸದಿಂದ ಮನೆಗೆ ಹಿಂದಿರುಗುವ ಮೊದಲೇ ಮನೆಯಲ್ಲಿರಬೇಕೆಂಬ ಗುರಿಯನ್ನು ತಲೆಯಲ್ಲಿಟ್ಟುಕೊಂಡು ತಿರುಗುತ್ತಿದ್ದ ಅಮ್ಮ, ದೂರದಿಂದ ಸಂತೆಗೆ ಹೋಗಿದ್ದು ಒಂದೇ ಒಂದು ಸರಕು ಕೊಳ್ಳಲು, ಅಂದು ಅವಳಿಗೆ ಬೇಕಾಗಿದ್ದು ರಂಗೋಲಿ ಕಟ್ಟು. ಮಾರ್ಕೆಟಿನ ಉದ್ದಗಲಗಳನ್ನು ಪದೇ

